# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ: 18.03.2016

## ಪತ್ರಿಕಾ ಪ್ರಕಟಣೆಗಾಗಿ

## ಸ್ವಚ್ಛ ಹಾಗೂ ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಕರೆ

18 ಮಾರ್ಚ್ 2016, ಮೈಸೂರು ನಗರದ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಕೆಎಸ್‌ಆರ್‌ಟಿಸಿ ಮೈಸೂರು ನಗರ ಡಿಪೋ ಸಂಯುಕ್ತಾಶ್ರಯದಲ್ಲಿ ಕೆಎಸ್‌ಆರ್‌ಟಿಸಿಯ ವಿಭಾಗೀಯ ಕಛೇರಿಯ ಪಕ್ಕದ ಆವರಣದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ ಬಿ ವಿ ಸಾಂಬಶಿವಯ್ಯನವರು ವಿದ್ಯಾರ್ಥಿಗಳು ಹಾಗೂ ಕೆಎಸ್‌ಆರ್‌ಟಿಸಿಯ ಸಿಬ್ಬಂದಿಗಳನ್ನು ಕುರಿತು ಮಾತನಾಡುತ್ತಾ, ಭಾರತದೇಶ ಸಾಂಸ್ಕೃತಿಕ ದೇಶವಾಗಿದೆ. ಆದರೆ ನಾವು ವಾಸಿಸುವ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವ ಮನೋಧರ್ಮ ನಮ್ಮಲ್ಲಿ ಕಡಿಮೆ ಇದೆ. ಇದನ್ನು ಮನಗಂಡ ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರಮೋದಿಯವರು ಮಹಾತ್ಮಗಾಂಧೀಜಿಯವರ ಕನಸನ್ನು ನನಸು ಮಾಡಲು ಸ್ವಚ್ಛಭಾರತ ಅಭಿಯಾನ ಎಂಬ ಕೇಂದ್ರ ಸರ್ಕಾರದ ಆಂದೋಲನವನ್ನು ಅಕ್ಟೋಬರ್ 2 2014 ರಂದು ರಾಜಘಾಟ್‌ನಲ್ಲಿ ಪ್ರಾರಂಭಿಸಿದರು. 2019ಕ್ಕೆ ಸ್ವಚ್ಛ ಮತ್ತು ಆರೋಗ್ಯಕರ ಭಾರತ ಮಾಡುವುದು ಅವರ ಉದ್ದೇಶವಾಗಿದೆ. ಆದ್ದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಇತರೆ ಎಲ್ಲಾ ವರ್ಗ / ಕ್ಷೇತ್ರಗಳ ಜನರು ಕೈ ಜೋಡಿಸಿ ಸ್ವಚ್ಛ ಹಾಗೂ ಆರೋಗ್ಯಕರ ಭಾರತವನ್ನಾಗಿ ರೂಪಿಸಬೇಕೆಂದು ಕರೆ ನೀಡಿದರು.

ಸ್ವಚ್ಛತಾ ಆಂದೋಲನವು ಬೆಳಗ್ಗೆ 8 ಘಂಟೆಗೆ ಪ್ರಾರಂಭವಾಗಿ 11 ಗಂಟೆಗೆ ಮುಕ್ತಾಯಗೊಂಡಿತು. ಈ ಆಂದೋಲನದಲ್ಲಿ 50ಕ್ಕೂ ಹೆಚ್ಚು ಎಂಎಸ್‌ಡಬ್ಲ್ಯೂ ವಿದ್ಯಾರ್ಥಿಗಳು, ಕಾಲೇಜಿನ ಪ್ರಾಚಾರ್ಯರಾದ ಪ್ರೊ ಎಂ ಮಹದೇವಪ್ಪನವರು, ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪಿ ಸೋಮಶೇಖರ್, ಅಧ್ಯಾಪಕವರ್ಗ, ಕೆಎಸ್‌ಆರ್‌ಟಿಸಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಡಾ. ರಾಮಮೂರ್ತಿ, ಸಂಚಾರ ನಿಯಂತ್ರಣಾಧಿಕಾರಿಗಳಾದ ಶ್ರೀ ಸುಧೀರ್, ಕಾರ್ಮಿಕ ಕಲ್ಯಾಣ ಅಧಿಕಾರಿಗಳಾದ ಶ್ರೀಮತಿ ನೇತ್ರಾವತಿ, ವಿಭಾಗೀಯ ಇಂಜಿನಿಯರ್ ರವರಾದ ಗಂಗಾಧರಪ್ಪ, ಕಾರ್ಮಿಕ ಸಂಘಟನೆಯ ಮುಖಂಡರುಗಳು ಹಾಗೂ ಇತರೆ ಸಿಬ್ಬಂಧಿವರ್ಗದವರು ಪಾಲ್ಗೊಂಡಿದ್ದರು. ಆಗಮಿಸಿದ್ದ ಅತಿಥಿಗಳನ್ನು ಡಾ. ಕುಮುದಿನಿ ಅಚ್ಚಿ ರವರು ಸ್ವಾಗತಿಸಿದರು. ಶ್ರೀಮತಿ ಬಿ ಸುಸ್ಮಿತಾ ರವರು ಎಲ್ಲರನ್ನು ವಂದಿಸಿದರು.

(ಪ್ರೊ ಎಂ ಮಹದೇವಪ್ಪ)

ಪ್ರಾಂಶುಪಾಲರು

ಜೆಎಸ್‌ಎಸ್ ... ವಿಜ್ಞಾನ ಕಾಲೇಜು

ಊಟಿ ರಸ್ತೆ, ಮೈಸೂರು-25

ಗೆ

ಸಂಪಾದಕರು

_______________

_______________

ಮೈಸೂರು